ಮೇಕೆದಾಟುವಿನಲ್ಲಿ ಡ್ಯಾಂ ನಿರ್ಮಾಣ ಮಾಡುವುದು

3095 (3781); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ಕನಕಪುರ ತಾಲ್ಲೂಕು, ಮೇಕೆದಾಟುವಿನಲ್ಲಿ ಡ್ಯಾಂ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಇ) ಮೇಕೆದಾಟು ಡ್ಯಾಂ ನಿರ್ಮಾಣ ಮಾಡಲು ಡಿ.ಪಿ.ಆರ್ ತಯಾರಿಸಲು ಜಾಗತಿಕ ಟೆಂಡರ್ ಕರೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಡಿ.ಪಿ.ಆರ್. ತಯಾರಿಸಲು ಯಾವ ಯಾವ ಸಂಸ್ಥೆಗಳು ಮುಂದೆ ಬಂದಿವೆ;

ಉ) ಹಾಗಿದ್ದಲ್ಲಿ, ಡಿ.ಪಿ.ಆರ್. ತಯಾರಿಸಲು ಯಾವ ಸಂಸ್ಥೆಗೆ ಮತ್ತು ಎಷ್ಟು ಮೊತ್ತಕ್ಕೆ ಯೋಜನೆ ವಹಿಸಲಾಗಿದೆ;

ಊ) ಡಿ.ಪಿ.ಆರ್. ತಯಾರಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ; ಹಾಗಿದ್ದಲ್ಲಿ ಯಾವಾಗ ಡಿ.ಪಿ.ಆರ್. ವರದಿ ನೀಡಲಾಗುವುದು?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಯಿಂದ ಊ) ವರೆಗೆ ಮೇಕೆದಾಟುವಿನ ಮೇಲ್ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ/ ಶೇಖರಣಾ ಜಲಾಶಯಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಇದು ಸದ್ಯದಲ್ಲಿ ಇನ್ನು ಪರಿಕಲ್ಪನೆಯ ಹಂತದಲ್ಲಿ ಇರುತ್ತದೆ. ವಿವರವಾದ ಸರ್ವೆ ಕಾರ್ಯ ನಡೆಸಿ ಅಂದಾಜು ತಯಾರಿಸಿದ ನಂತರ ಇದರ ಸ್ಪಷ್ಟ ಚಿತ್ರಣ ಲಭ್ಯವಾಗುತ್ತದೆ.

ಈ ನಿಟ್ಟಿನಲ್ಲಿ ತನಿಖೆ, ಸರ್ವೆ, ವಿನ್ಯಾಸ ನಕ್ಷೆ ಹಾಗೂ ಅಂದಾಜುಗಳ ತಯಾರಿಕೆ, ವಿವರವಾದ ಯೋಜನಾ ವರದಿಯ ತಯಾರಿಕೆ,

ಇತ್ಯಾದಿಗಳಿಗಾಗಿ ಸಮಾಲೋಚಕರನ್ನು ಪೂರ್ವಾರ್ಹತೆಗೊಳಿಸುವ ಸಲುವಾಗಿ ದಿನಾಂಕ:25–10–2014 ರಂದು Global expression of Interest ಅನ್ನು ಆಹ್ವಾನಿಸಿದ್ದು, ಕೆಳಕಂಡ 5 ಸಮಾಲೋಚಕರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

1. M/s WAPCOS limited & DHI (India)Water & Evironmental Pvt Ltd.
2. M/s SNC-Lavalin Engineering India Pvt.Ltd.
3. M/s Ramboll(Danmark)A/S.
4. M/s EI technologies Pvt.Ltd &
5. M/s Tahal Consulting Engineers Limited.

ಪೂರ್ವಾರ್ಹತೆಗೊಳ್ಳುವ ಸಮಾಲೋಚಕರಿಂದ ವಿವರವಾದ ಯೋಜನಾ ವರದಿಯನ್ನು ತಯಾರಿಸಿದ ನಂತರ ಮುಂದಿನ ವಿಧಿವಿಧಾನಗಳನ್ನು ಅಂತಿಮಗೊಳಿಸಲಾಗುವುದು. ಈ ಯೋಜನೆಗೆ ಸಲ್ಲಿಸಿರುವ Pre qualification ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದ್ದು, ಅರ್ಹ ಸಂಸ್ಥೆಗೆ RFD Document ಅನ್ನು ನೀಡುವ ಸಮಯದಲ್ಲಿ ಕಾಲಮಿತಿಯ ಬಗ್ಗೆ ತೀರ್ಮಾನಿಸಲಾಗುವುದು.

ಖಾಸಗಿ ಸಂಸ್ಥೆಯಿಂದ 11ಇ ನಕ್ಷೆ ಅಳತೆ ಯೋಜನೆಯ ವಿವರ

3096 (4080); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಖಾಸಗಿ ಸಂಸ್ಥೆಯ ಮೂಲಕ 11ಇ ನಕ್ಷೆ ಅಳತೆ ಮಾಡಿಸಿದ ಯೋಜನೆಯು ಯಾವ ಹಂತದಲ್ಲಿದೆ (ವಿವರವಾದ ಮಾಹಿತಿ ಒದಗಿಸುವುದು)

ಆ) ಹಾಗಿದ್ದಲ್ಲಿ, ಪ್ರಾಯೋಗಿಕ ಯೋಜನೆಯಲ್ಲಿ ಅಳತೆ ಮಾಡಿದ ಖಾಸಗಿ ಸಂಸ್ಥೆಯವರು, ರೈತರು ಸಲ್ಲಿಸಿದ 11ಇ ಮತ್ತು ಪೋಡಿ ಅರ್ಜಿಗಳನ್ನು